ಮೊಳಕಾಲ್ಮೂರು ತಾಲ್ಲೂಕಿನಲ್ಲಿ ನಬಾರ್ಡ್ ನೆರವಿನಿಂದ ರಸ್ತೆ ಕಾಮಗಾರಿ.

2867: (3866)

ಶ್ರೀ ಎನ್.ವೈಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ನಬಾರ್ಡ್ ನೆರವಿನೊಡನೆ ರಸ್ತೆ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ಅಭಿವೃದ್ಧಿಗೊಳಿಸದೇ ಇರಲು ಕಾರಣಗಳೇನು?

ಇ) ನಬಾರ್ಡ್ ನೆರವಿನಿಂದ ಎಲ್ಲಾ ಗ್ರಾಮಾಂತರ ಪ್ರದೇಶಗಳ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೌದು 2 ರಸ್ತೆ ಕಾಮಗಾರಿಗಳನ್ನು 103.82 ಲಕ್ಷ ರೂ. ಮೊತ್ತದಲ್ಲಿ ಕೈಗೊಳ್ಳಲಾಗಿದೆ.

ಆ) ಅವಶ್ಯಕತೆ ಹಾಗೂ ಹಣದ ಲಭ್ಯತೆಗನುಗುಣವಾಗಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ.

ಇ) ನಬಾರ್ಡ್‌ನಿಂದ ಪ್ರತಿ ಸಾಲಿನಲ್ಲಿ ನಿರ್ದಿಷ್ಟ ಮೊತ್ತದ ಸಾಲ ರಾಜ್ಯಕ್ಕೆ ದೊರೆಯುತ್ತಿದ್ದು ಅವಶ್ಯಕತೆ ಹಾಗೂ ಹಣದ ಲಭ್ಯತೆಗನುಗುಣವಾಗಿ ಸಾಧ್ಯವಾದಷ್ಟು ಮಟ್ಟಿನ ಗ್ರಾಮಾಂತರ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಕ್ರಮಗೊಳ್ಳಲಾಗುತ್ತಿದೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಪಶುವೈದ್ಯಾಲಯಗಳು.

2868:(3865)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಪಶುವೈದ್ಯಾಲಯಗಳೆಷ್ಟು?

ಆ) ಅವುಗಳು ಇರುವ ಸ್ಥಳಗಳಾವುವು?

ಇ) ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದ ಹೊನ್ನೂರು ಗ್ರಾಮದಲ್ಲಿ ಹೊಸದಾಗಿ ಪಶುವೈದ್ಯಾಲಯವನ್ನು ಸ್ಥಾಪಿಸಲು ಆಶ್ವಾಸನೆ ನೀಡಿದ್ದರೂ ಸಹ ಇದುವರೆಗೆ ಅಲ್ಲಿ ಸ್ಥಾಪಿಸದೇ ಇರಲು ಕಾರಣಗಳೇನು?

ಈ) 1998-99ರಲ್ಲಿ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಎಲ್ಲೆಲ್ಲಿ ಪಶುವೈದ್ಯಾಲಯಗಳನ್ನು ಸ್ಥಾಪಿಸಲಾಗುವುದು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಪಶು ಆಸ್ಪತ್ರೆ : 1

ಪಶುಚಿಕಿತ್ಸಾಲಯ : 2

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ : 5

ಒಟ್ಟು 8

ಆ) ಪಶು ಆಸ್ಪತ್ರೆ - ಮೊಳಕಾಲ್ಮೂರು

ಪಶುಚಿಕಿತ್ಸಾಲಯ: 1) ರಾಂಪುರ

2) ವೆಂಕಟಾಪುರ

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು 1) ಬಿ.ಜಿ.ಕೆರೆ

2) ನಾಗಸಮುದ್ರ

3) ಪಿರೇಕೆರಹಳ್ಳಿ

4) ತಮ್ಮನಹಳ್ಳಿ

5) ಬೈರಪುರ

ಇ) ಆಶ್ವಾಸನೆ ನೀಡಿರುವುದಿಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.